# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

**(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)**

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ಉಪವಿಭಾಗ
ಗುಂಡ್ಲುಪೇಟೆ

CIN: U40109KA2004SGC035177
Ph.No:08229-222432
E-Mail:gpetcesc@gmail.com

ಸಂಖ್ಯೆ: ಸ.ಕಾ.ನಿ.ಇಂ(ವಿ)/ಹಿ.ಸ/ಗು.ಪೇ/2019-20/Cys-34 ದಿನಾಂಕ : 03.10.2019

## ಸಭೆಯ ನಡಾವಳಿಗಳು

ದಿನಾಂಕ:-20.09.2019 ರಂದು ಗುಂಡ್ಲುಪೇಟೆ ಉಪವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾಮರಾಜನಗರ ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ ಪೂರ್ಣಚಂದ್ರ ತೇಜಸ್ವಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ ಚಾಮರಾಜನಗರ ವಿಭಾಗ
2. ಶ್ರೀ ಕೆ.ಎಂ.ಸಿದ್ದಲಿಂಗಪ್ಪ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಗುಂಡ್ಲುಪೇಟೆ ಉಪವಿಭಾಗ.
3. ಶ್ರೀ ಜಿ.ಮಹೇಶ್ : ಸಹಾಯಕ ಇಂಜಿನಿಯರ್(ವಿ), ಗುಂಡ್ಲುಪೇಟೆ ಪಟ್ಟಣ ಶಾಖೆ.
4. ಶ್ರೀ ಶಿವಲಿಂಗ : ಕಿರಿಯ ಇಂಜಿನಿಯರ್(ವಿ), ಹಂಗಳ ಶಾಖೆ.
5. ಶ್ರೀ ನವೀನ್ : ಕಿರಿಯ ಇಂಜಿನಿಯರ್(ವಿ), ತೆರಕಣಾಂಬಿ ಶಾಖೆ.
6. ಶ್ರೀ ಸಮೀವುಲ್ಲಾ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಬೊಮ್ಮಲಾಪುರ ಶಾಖೆ.
7. ಶ್ರೀ ನಾಗೇಂದ್ರ : ಕಿರಿಯ ಇಂಜಿನಿಯರ್(ವಿ), ಮಾಡ್ರಹಳ್ಳಿ ಶಾಖೆ.
8. ಶ್ರೀ ಆನಂದ್.ಎಸ್.ಎನ್ : ಪ್ರಭಾರ ಕಿರಿಯ ಸಹಾಯಕ ಕಂದಾಯ ಶಾಖೆ.

ಸಭೆಯಲ್ಲಿ ಗುಂಡ್ಲುಪೇಟೆ ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ

| ಕ್ರ. ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಸಲಹೆ |
|---|---|---|---|
| 1 | ರೇವಣ್ಣ ಹಂಗಳಪುರ 9980617568 | * ದಾರಿಗಳಿಗೆ ಸೇರಿದ ಕಂಬಗಳ ದುರಸ್ಥಿ ಬಗ್ಗೆ. ಹಂಗಳಪುರ 3 ತಿಂಗಳುಗಳಿಂದ ತೊಂದರೆಯಾಗಿದ್ದು ಅರ್ಜಿ ನೀಡಿರುತ್ತೇವೆ. ಮಾರ್ಗದಾಳು ಜಯರಾಮು ರವರು ಸರಿಯಾಗಿ ಸ್ಪಂದಿಸುತ್ತಿಲ್ಲ. ಊರಿನ ಕೆರೆಯ ಹತ್ತಿರ ಕಂಬ ಅಳವಡಿಸಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಸಂಬಂಧಿಸಿದ ಶಾಖಾಧಿಕಾರಿಗೆ ಕೂಡಲೇ ಸರಿಪಡಿಸುವಂತೆ ಸೂಚಿಸಲಾಯಿತು. |
| 2 | ಎನ್. ಕುಮಾರ್ ನಾಯಕ ಪುರಸಭಾ ಸದಸ್ಯರು 9844400568 | * ಎ) ವಾರ್ಡ್‌ನಲ್ಲಿನ ಗ್ರಾಹಕರ ಮನೆಯ ಮೇಲೆ ವಿದ್ಯುತ್ ತಂತಿ ಹಾದು ಹೋಗಿದ್ದು ತುಂಬಾ ತೊಂದರೆಯಾಗುತ್ತಿದ್ದು ಸರಿಪಡಿಸಲು ತಿಳಿಸಿರುತ್ತಾರೆ | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಸ್ಥಳಾಂತರಿಸಲು ಅರ್ಜಿ ನೀಡಬೇಕೆಂದು ತಿಳಿಸಿದರು. |
| | | * ಬಿ) ಅಂಬೇಡ್ಕರ್ ಕಾಲೋನಿಯಲ್ಲಿ ಯಾವಾಗಲೂ ಸಿಂಗಲ್ ಫೇಸ್ ಆಗುತ್ತಿದ್ದು ವಿದ್ಯುತ್ ಅಡಚಣೆ ಆಗುತ್ತದೆ ಎಂದು ತಿಳಿಸಿರುತ್ತಾರೆ | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಹೊಸ ಟಿ.ಸಿ ಅಳವಡಿಸಿದ್ದು ಭಾರವನ್ನು ವರ್ಗಾಯಿಸಲಾಗಿದೆ ಎಂದು ತಿಳಿಸಿದರು. |
| | | * ಸಿ) ಗ್ರಾಹಕರಿಗೆ ಹೆಚ್ಚುವರಿ ಭದ್ರತಾ ಠೇವಣಿಯನ್ನು ಕಡ್ಡಾಯ ಮಾಡಿರುವ ಬಗ್ಗೆ ತಿಳಿಸಿರುತ್ತಾರೆ | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಅದರ ಬಗ್ಗೆ ವಿವರಣೆಯನ್ನು ನೀಡಿ ಕಡ್ಡಾಯವಾಗಿ ಪಾವತಿಸಬೇಕೆಂದು ತಿಳಿಸಿದರು. |
| | | * ಡಿ) ನೌಕರರು ಗ್ರಾಹಕರ ತೊಂದರೆಗಳಿಗೆ ಕೂಡಲೇ ಸ್ಪಂದಿಸಬೇಕೆಂದು ಕೋರಿರುತ್ತಾರೆ | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಸಂಬಂಧಿಸಿದ ಶಾಖಾಧಿಕಾರಿಗೆ ನೌಕರರು ಗ್ರಾಹಕರ ಜೊತೆ ಸ್ಪಂದಿಸಲು ತಿಳಿಸಿ ಎಂದು ಸೂಚಿಸಿದರು |

| | | | |
|---|---|---|---|
| 3 | ಸಿ.ಚೆನ್ನಬಸವಯ್ಯ ಮಲ್ಲಮ್ಮನಹುಂಡಿ 9482265408 | * ಮಲ್ಲಮ್ಮನಹುಂಡಿಯಲ್ಲಿ 40 ವರ್ಷಗಳಿಂದ ಹೊಸದಾಗಿ ಕಂಬ ಅಳವಡಿಸಿಕೊಳ್ಳಲು ಕ್ರಮ ಕೈಗೊಂಡಿಲ್ಲ ಹಾಗೂ ಅಲ್ಲಿರುವ ನಾಗರಿಕರಿಗೆ ವಿದ್ಯುತ್ ಸರ್ವೀಸ್ ನೀಡಲು ಕ್ರಮ ಕೈಗೊಳ್ಳಬೇಕು | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು DDUGJY ಯೋಜನೆಯಲ್ಲಿ ಕೈಗೊಳ್ಳುತ್ತೇವೆಂದು ತಿಳಿಸಿದರು. |
| 4 | ಉದಯ್ ಕುಮಾರ್ 2ನೇ ವಾರ್ಡ್ ಗುಂಡ್ಲುಪೇಟೆ 9980617684 | * ಸೋಮೇಶ್ವರ ಹಾಸ್ಟೆಲ್ ಹಿಂಭಾಗದ ಟಿ.ಸಿ ಸರಿಯಾಗಿ ನಿರ್ವಹಣೆ ಇಲ್ಲ ಸ್ಥಳಾಂತರ ಮಾಡಿಸಿಕೊಡಬೇಕು ಇಲ್ಲದಿದ್ದಲ್ಲಿ ಫೇನಸಿಂಗ್ ಮಾಡಿಸಿಕೊಡಬೇಕು ಎಂದು ತಿಳಿಸಿರುತ್ತಾರೆ. | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಟಿ.ಸಿ ಸ್ಥಳಾಂತರಕ್ಕೆ ಗ್ರಾಹಕರೇ ಸ್ಥಳಾಂತರದ ಶುಲ್ಕವನ್ನು ಭರಿಸಿದಲ್ಲಿ ಸ್ಥಳಾಂತರಿಸಲಾಗುವುದೆಂದು ತಿಳಿಸಿದರು. |
| | | * ಹಾಸ್ಪೆಟಲ್ ಹತ್ತಿರ ಕಾಂಪೌಂಡ್ ಪಕ್ಕದಲ್ಲಿ ಗಿಡಗಳು ಬೆಳೆದಿದ್ದು ಲೈನ್ ನ ತೊಂದರೆಯಾಗುತ್ತಿದ್ದು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ ಎಂದು ತಿಳಿಸಿರುತ್ತಾರೆ. | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಜಂಗಲ್ ಕಟಿಂಗ್ ಮಾಡಿಸಲಾಗುವುದೆಂದು ತಿಳಿಸಿದರು. |
| 5 | ಸುರೇಶ್ ನಾಯಕ ಕರವೇ ತಾಲ್ಲೂಕು ಅಧ್ಯಕ್ಷರು 8951615171<br><br>ಜಗದೀಶ್ ಕ.ರ.ವೇ ಜಿಲ್ಲಾ ಸಂಘಟನಾ ಕಾರ್ಯದರ್ಶಿ 9986294124 | * ದಿನದ 24 ಗಂಟೆಯಲ್ಲಿ ವಿದ್ಯುತ್ ಅಡಚಣೆ ಹೆಚ್ಚಾಗಿ ಆಗುತ್ತಿರುತ್ತದೆ.<br><br>* ಹೊಸ ಕಂಬಗಳನ್ನು ಅಳವಡಿಸಿದ್ದು ಲೈನ್ ಯಾಕೆ ಎಳೆದಿಲ್ಲ ಎಂದು ತಿಳಿಸಿರುತ್ತಾರೆ.<br><br>* ಗುಂಡ್ಲುಪೇಟೆ ಪಾರ್ಕ್‌ಗೆ ಸೇರಿದ ಜಾಗದಲ್ಲಿ ಟಿ.ಸಿ ಅಳವಡಿಸಬೇಕೆಂದು ತಿಳಿಸಿರುತ್ತಾರೆ.<br><br>* Shifting Charges ಗ್ರಾಹಕರೇ ಪಾವತಿಸಬೇಕಾಗಿರುವ ಬಗ್ಗೆ ತಿಳಿಸಿರುತ್ತಾರೆ.<br><br>* ಹಳ್ಳಿಗಳಲ್ಲಿ NJY ಜಾರಿಯಾಗದಿರುವ ಬಗ್ಗೆ.<br><br>* ಕಬ್ಬಿಣದ ಕಂಬಗಳನ್ನು ಬದಲಾಯಿಸುವ ಬಗ್ಗೆ ತಿಳಿಸಿರುತ್ತಾರೆ | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಗುಂಡ್ಲುಪೇಟೆ ಪಟ್ಟಣದಲ್ಲಿ IPDS ಯೋಜನೆಯಡಿಯಲ್ಲಿ ಕಾಮಗಾರಿ ಕೆಲಸ ಪ್ರಗತಿಯಲ್ಲಿದ್ದು ಯೋಜನೆಯ ಕಾಮಗಾರಿಗಳು ಮುಗಿಯುವವರೆವಿಗೆ ಅಡಚಣೆಯಾಗುವ ಬಗ್ಗೆ ತಿಳಿಸಿದರು.<br><br>*ಕಾಮಗಾರಿ ಮುಗಿದಿರುವ NJY ಲೈನುಗಳನ್ನು ಚಾಲನೆಗೊಳಿಸಲಾಗಿದೆ ಎಂದು ತಿಳಿಸಿದರು. |

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ
ಚಾಮರಾಜನಗರ.

**ಪ್ರತಿಯನ್ನು:**

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರ ಅವಗಾಹನೆಗಾಗಿ.
2. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಸೆಸ್ಕ್, ಚಾಮರಾಜನಗರ ಮತ್ತು ಕೊಡಗು ವೃತ್ತ ಮೈಸೂರು ರವರ ಅವಗಾಹನೆಗಾಗಿ.
3. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು. ರವರ ಅವಗಾಹನೆಗಾಗಿ
4. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು. ರವರ ಅವಗಾಹನೆಗಾಗಿ
5. ಈುರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು. ರವರ ಮಾಹಿತಿಗಾಗಿ.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಗುಂಡ್ಲುಪೇಟೆ ಉಪವಿಭಾಗ ರವರ ಮಾಹಿಗಾಗಿ.
7. ಹಿಆಸ/ಪ್ರಕ/ಕಡತ.